ದಿನಾಂಕ: 28.10.2021 ರಂದು ಬೆಳಗ್ಗೆ 11.00 ಗಂಟೆಗೆ ರಾಜಾಜಿನಗರ ವಾರ್ಡ್ ನಂ. 100 ರಲ್ಲಿ ಶ್ರೀ ಧೃವರಾಜ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡಾವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು ಹಾಗೂ ವಾರ್ಡ್ ಕಮಿಟಿ ಸದಸ್ಯರು:-**

1. ಸನ್ಮಾನ್ಯ ಶ್ರೀ ಎಸ್. ಸುರೇಶ್‌ಕುಮಾರ್, ರಾಜಾಜಿನಗರ ವಿಧಾನ ಸಭಾ ಕ್ಷೇತ್ರ
2. ಶ್ರೀ ಧೃವರಾಜ್ ನೋಡಲ್ ಅಧಿಕಾರಿಗಳು
3. ಶ್ರೀ ಯೋಗೇಶ್.ಕೆ.ಪಿ. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
4. ಶ್ರೀ ಸುಭಾಸ್ ಪಾಟೀಲ್, ಸಹಾಯಕ ಅಭಿಯಂತರರು, ವಾರ್ಡ್ ನಂ. 100
5. ಶ್ರೀಮತಿ ಸುಮಲತಾ, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಎಸ್.ಡಬ್ಲ್ಯೂ.ಎಂ.
6. ಶ್ರೀ ಪಿ.ಕೆ. ಶಂಕರ್‌ರಾಜ್, ಸ.ಕಾ.ನಿ.ಅ. , ಬೆಸ್ಕಾಂ
7. ಶ್ರೀಮತಿ ಡಾ: ಶೈಲಜಾ, ಆರೋಗ್ಯಾಧಿಕಾರಿ ಸುಬ್ರಮಣಿ ನಗರ
8. ಶ್ರೀಮತಿ ಡಾ: ಶಿಲ್ಪಾ, ಕೋವಿಡ್ , ಆರೋಗ್ಯಾಧಿಕಾರಿ
9. ಶ್ರೀಮತಿ ಡಾ: ಶನಿಶ್ರೀ, ಕೋವಿಡ್ ಆರೋಗ್ಯಾಧಿಕಾರಿ
10. ಶ್ರೀ ನಾಗರಾಜ್.ಕೆ.ಬಿ. ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ.
11. ಶ್ರೀ ಸೈಯದ್‌ಜಮೀಲ್, ಕಿರಿಯ ಅಭಿಯಂತರರು [ವಿದ್ಯುತ್]
12. ಶ್ರೀ ಕುಬೇರ್. ಪಿ.ಎಸ್.ಐ. ಬಸವೇಶ್ವರನಗರ
13. ಶ್ರೀ ಶಿವರಾಮ್, ಅರಣ್ಯ ಅಧಿಕಾರಿ
14. ಶ್ರೀ ರಘು, ಕಿರಿಯ ಆರೋಗ್ಯ ಪರಿವೀಕ್ಷಕರು
15. ಶ್ರೀ ಎಸ್. ಮಲ್ಲೇಶ್, ಕಂದಾಯ ನಿರೀಕ್ಷಕರು
16. ಶ್ರೀ ಸಿದ್ದೇಶ್, ಮಾರ್ಷಲ್
17. ಶ್ರೀ ರಮೇಶ್.ಎ.ಹೆಚ್.ಬಿ.ಬಿ.ಎಂ.ಪಿ.
18. ಶ್ರೀ ಎಂ. ನರಸಿಂಹಯ್ಯ,
19. ಶ್ರೀ ಗಿರೀಶ್, ಸದಸ್ಯರು
20. ಶ್ರೀ ರಾಘವೇಂದ್ರ, ಸದಸ್ಯರು
21. ಶ್ರೀ ಕಾರ್ತಿಕ್ ಪ್ರಭಾಕರ್, ಸದಸ್ಯರು
22. ಶ್ರೀ ರಂಗಸ್ವಾಮಿ, ಟಿ.ಐ.

1. ವಾರ್ಡ್ ಕಮಿಟಿ ಸಭೆಗೆ ಪ್ರಪ್ರಥಮ ಬಾರಿಗೆ ಮಾನ್ಯ ಶ್ರೀ ಎಸ್. ಸುರೇಶ್ ಕುಮಾರ್, ರಾಜಾಜಿನಗರ ಕ್ಷೇತ್ರದ ಶಾಸಕರು ಹಾಗೂ ಮಾಜಿ ಮಂತ್ರಿಗಳು, ಕರ್ನಾಟಕ ಸರ್ಕಾರ ರವರು ನೋಡಲ್ ಅಧಿಕಾರಿಗಳೊಂದಿಗೆ ಹಾಗೂ ವಾರ್ಡ್ ಕಮಿಟಿಯ ಸದಸ್ಯರು ಮತ್ತು ನೌಕರರುಗಳೊಂದಿಗೆ ಆಸೀನರಾಗಿರುತ್ತಾರೆ ಎಂಬ ಮಾಹಿತಿಯನ್ನು ಸಭೆಯಲ್ಲಿ ಗೌರವಾನ್ವಿತವಾಗಿ ಸ್ವಾಗತಿಸಲಾಯಿತು. ಹಾಗೂ ಸಭೆಯನ್ನು ಪ್ರಾರಂಭಿಸಲು ಕೋರಲಾಯಿತು.
2. ವಾರ್ಡ್ ವ್ಯಾಪ್ತಿಯಲ್ಲಿ ವಾರ್ಡಿನ ಸದಸ್ಯರು ರಸ್ತೆಯಲ್ಲಿ ಬಿದ್ದಿರುವ ಗುಂಡಿ ಮುಚ್ಚುವ ಕಾರ್ಯದ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಸ.ಕಾ.ನಿ.ಅ ಹಾಗೂ ವಾರ್ಡ್ ಸ.ಅ. ರವರು ಕಾಮಗಾರಿಯು ನಿರಂತರ ಮಳೆಯಿಂದಾಗಿ ಸ್ವಲ್ಪ ನಿಧಾನ ಗತಿಯಲ್ಲಿ ಚಾಲ್ತಿಯಲ್ಲಿರುತ್ತದೆ. ಮಳೆ ನಿಂತ ನಂತರ ಟಾರ್ ಹಾಕುವ ಕಾಮಗಾರಿಯ ಕೆಲಸವನ್ನು ಕೈಗೊಳ್ಳಲಾಗುವುದೆಂದು ಸಭೆಗೆ ತಿಳಿಸಿದರು.
3. ಸದಸ್ಯರಾದ ಶ್ರೀ ಗಿರೀಶ್ ಹಾಗೂ ಕಿರಣ್ ರವರು ಬೀದಿ ದೀಪಗಳು ಉರಿಯುತ್ತಿಲ್ಲ ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಶಾಸಕರು ವಿದ್ಯುತ್ ಅಭಿಯಂತರರ ರವರಿಗೆ ತುರ್ತಾಗಿ ಕ್ರಮ ಕೈಗೊಂಡು ಯಾವುದೇ ರೀತಿ ತೊಂದರೆಯಾಗದಂತೆ ಕ್ರಮ ವಹಿಸಲು ಸೂಚಿಸಿದರು.
4. ಸದಸ್ಯರಾದ ಶ್ರೀ ಗಿರೀಶ್ ರವರು ವಾರ್ಡಿನ ರಸ್ತೆಯಲ್ಲಿ ಬಾಗಿರುವ ವಿದ್ಯುತ್ ಕಂಬಗಳನ್ನು ಬದಲಾವಣೆ ಮಾಡುವಂತೆ ಸಭೆಯಲ್ಲಿ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಮಾನ್ಯ ಶಾಸಕರು ಹಾಗೂ ನೋಡಲ್ ಅಧಿಕಾರಿಗಳು, ಬೆಸ್ಕಾಂ ಅಭಿಯಂತರರಿಗೆ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. ಇದಕ್ಕೆ ಉತ್ತರವಾಗಿ ಬೆಸ್ಕಾಂ ಅಧಿಕಾರಿಗಳು ಈಗಾಗಲೇ ಹಂತ ಹಂತವಾಗಿ ಬಾಗಿರುವ ಕಂಬಗಳನ್ನು ತೆಗೆದು ಹೊಸ ಕಂಬಗಳನ್ನು ಅಳವಡಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ ಎಂದು ಸಭೆಗೆ ತಿಳಿಸಿದರು.

ಪು.ತಿ.ನೋ.

5. ಸದಸ್ಯರಾದ ಶ್ರೀ ಗಿರೀಶ್ ಹಾಗೂ ಕಿರಣ್ ರವರು ವಾರ್ಡಿನಲ್ಲಿ ಅನುಪಯುಕ್ತವಾಗಿ ನಿಂತಿರುವ ವಾಹನಗಳನ್ನು ತೆರವುಗೊಳಿಸಲು ವಿನಂತಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ಕುಬೇರ್ ಪಿ.ಎಸ್.ಐ. ರವರು ಇಂತಹ ವಾಹನಗಳನ್ನು ಆಕ್ಷನ್ ಮುಖಾಂತರ ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
6. ಸದಸ್ಯರಾದ ಶ್ರೀ ಕಾರ್ತಿಕ್ ರವರು ಆರ್.ಟಿ.ಓ. ಕಚೇರಿಯ ಆವರಣದಲ್ಲಿ ಬಿದ್ದಿರುವ ಕಸವನ್ನು ತೆರವುಗೊಳಿಸಲು ವಿನಂತಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ಅಭಿಯಂತರರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
7. ಸದಸ್ಯರಾದ ಶ್ರೀ ಕಾರ್ತಿಕ್ ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ. ಚೇಂಬರ್‌ಗಳಿಂದ ನೀರು ಉಕ್ಕಿ ಹರಿಯುತ್ತಿರುವ ಬಗ್ಗೆ ಕಮಿಟಿ ಸಭೆಯಲ್ಲಿ ಪ್ರಸ್ತಾಪಿಸಿದರು. . ಇದಕ್ಕೆ ಉತ್ತರವಾಗಿ ಬಿ.ಡಬ್ಲ್ಯೂ.ಎಸ್.ಎಸ್.ಬಿ. ಅಭಿಯಂತರರು ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.
8. ಮಾನ್ಯ ಶಾಸಕರು ರಸ್ತೆಯಲ್ಲಿರುವ ಶೋಲ್ಡರ್ ಡ್ರೈನ್ ಶುಚಿಗೊಳಿಸಿ, ಮಳೆಗಾಲದಲ್ಲಿ ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲು ಬಿ.ಬಿ.ಎಂ.ಪಿ. ಅಧಿಕಾರಿಗಳಿಗೆ ಸೂಚಿಸಿದರು. . ಇದಕ್ಕೆ ಉತ್ತರವಾಗಿ ಸ.ಕಾ.ನಿ.ಅ ಮತ್ತು ಸ.ಅ. ರವರಿಗೆ ಕ್ರಮ ಕೈಗೊಳ್ಳುವುದಾಗಿ ಸಭೆಗೆ ತಿಳಿಸಿದರು.
9. ಸದಸ್ಯರಾದ ಶ್ರೀ ಕಾರ್ತಿಕ್ ರವರು ಜಡ್ಜಸ್ ಕಾಲೋನಿಯಲ್ಲಿ ಮಳೆಗಾಲದಲ್ಲಿ ರಸ್ತೆಯ ಮೇಲೆ ನೀರು ನಿಂತು ಸಾರ್ವಜನಿಕರಿಗೆ ತೊಂದರೆಯಾಗುವ ಬಗ್ಗೆ ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ಈಗಾಗಲೇ ಕೆಲವು ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚಿದ್ದು, ಇನ್ನು ಹಲವು ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳನ್ನು ಮುಚ್ಚುವ ಕಾರ್ಯ ಪ್ರಗತಿಯಲ್ಲಿರುತ್ತದೆ.
10. ಸದಸ್ಯರಾದ ಶ್ರೀ ಕಾರ್ತಿಕ್ ಹಾಗೂ ಗಿರೀಶ್ ರವರು ಬೀದಿ ನಾಯಿ ಕಚ್ಚಿದವರಿಗೆ ಪರಿಹಾರ ಕೊಡಿಸುವಂತೆ ಮಾನ್ಯ ಶಾಸಕರಲ್ಲಿ ವಿನಂತಿಸಿಕೊಂಡರು. ಇದಕ್ಕೆ ಉತ್ತರವಾಗಿ ಶಾಸಕರಾದ ಶ್ರೀ ಎಸ್. ಸುರೇಶ್ ಕುಮಾರ್ ರವರು ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.
11. ಮಾನ್ಯ ಶಾಸಕರು ಆರೋಗ್ಯಾಧಿಕಾರಿಗಳ ಜೊತೆ ಕೋವಿಡ್ 3ನೇ ಅಲೆಯ ಬಗ್ಗೆ ಚರ್ಚಿಸಿದರು. ಹಾಗೂ 3ನೇ ಅಲೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವಂತೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಉತ್ತರವಾಗಿ ಈಗಾಗಲೇ ಸಾರ್ವಜನಿರಿಗೆ ಅರಿವು ಮೂಡಿಸಲಾಗುತ್ತಿರುತ್ತದೆ. ಹಾಗೀ ಕೋವಿಡ್ ವ್ಯಾಕ್ಸಿನೇಷನ್ ಶೇ. 98% ಆಗಿದೆ ಎಂದು ಸಭೆಗೆ ತಿಳಿಸಿದರು.
12. ವಾರ್ಡಿನ ಸದಸ್ಯರು ನೇತಾಜಿ ಆಟದ ಮೈಧಾನದ ಹತ್ತಿರ ಬಿದ್ದಿರುವ ಡೆಬ್ರಿಸನ್ನು ತೆರವುಗೊಳಿಸುವಂತೆ ಸಭೆಗೆ ತಿಳಿಸಿದರು. ಇದಕ್ಕೆ ಉತ್ತರವಾಗಿ ವಾರ್ಡಿನ ನೋಡಲ್ ಅಧಿಕಾರಿಗಳು ಮಳೆನೀರು ಗಾಲುವೆ ಇಲಾಖಾ ಅಧಿಕಾರಿಗಳಿಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.
13. ವಾರ್ಡ್ ವ್ಯಾಪ್ತಿಯಲ್ಲಿ ಬರುವ ಮರದ ಕೊಂಬೆಗಳನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಿದರು. ಇದಕ್ಕೆ ಉತ್ತರವಾಗಿ ಶ್ರೀ ಶಿವರಾಂ. ಅರಣ್ಯಧಿಕಾರಿಗಳು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

14. ಸಮಾನ್ಯ ಶ್ರೀ ಎಸ್.ಸುರೇಶ್ ಕುಮಾರ್, ರಾಜಾಜಿನಗರ ಶಾಸಕರು ರವರು ಮಹಾತ್ವಾಕಾಂಕ್ಷಿ ವಾರ್ಡ್ ಕಮಿಟಿ ಸಭೆಗೆ ಪ್ರತಿ ಸಭೆಗೆ ಹಾಜರಾಗಿ ಮುಂದಿನ ದಿನಗಳಲ್ಲಿ ಉದ್ಭವಿಸಬಹುದಾದ ಯೋಜನೆಗಳನ್ನು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗಲು ಸೂಚಿಸಿರುತ್ತಾರೆ.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 100